# ವಿಶೇಷ ಆರ್ಥಿಕ ವಲಯಗಳು – ವ್ಯಾಪಾರ ವಹಿವಾಟು ಸುಗಮಗೊಳಿಸುವ ದೃಷ್ಟಿಯಲ್ಲಿ

ಮಾಲಿನಿ ಎಲ್ ತಂತ್ರಿ



## ಪೀಠಿಕೆ

ಇತ್ತೀಚಿನ ವರ್ಷಗಳಲ್ಲಿ ಭಾರತದ ವ್ಯಾಪಾರ ವಹಿವಾಟು ಕಾರ್ಯನೀತಿಯಲ್ಲಿ ಗಮನಾರ್ಹ ಬದಲಾವಣೆಯು ಕಂಡುಬಂದಿದೆ.ಈ ಕಾರ್ಯನೀತಿಯ ಒಳಹಂದರ ಮತ್ತು ಸಾಂಸ್ಥಿಕ ಚೌಕಟ್ಟನ್ನು ಬಲಗೊಳಿಸುವಿಕೆಯೇ ಈ ಬದಲಾವಣೆಯಾಗಿದೆ. ಈ ಬಲಗೊಳಿಸುವಿಕೆಯನ್ನು ವಹಿವಾಟುಗಳನ್ನು ನಡೆಸಲು ಬೇಕಾದ ಸಮಯವನ್ನು ಕಡಿಮೆಗೊಳಿಸುವಿಕೆ ಹಾಗೂ ವಹಿವಾಟಿನ ವೆಚ್ಚಗಳನ್ನು ಕಡಿತಗೊಳಿಸುವಿಕೆಗಾಗಿ ಮಾಡಲಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಬದಲಾವಣೆಯು ವ್ಯಾಪಾರ ವಹಿವಾಟುಗಳ ಸರಳೀಕರಣ ಕ್ರಮಗಳ (ಟಿಎಫ್) ಭಾಗವಾಗಿದೆ ಎನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಆರ್ಥಿಕತೆಯು ೧೯೯೧ ರಿಂದ ಉದಾರೀಕರಣದ ದಾರಿಯಲ್ಲಿ ಹೆಜ್ಜೆ ಹಾಕುತ್ತಿರುವುದನ್ನು ಒಂದು ಸ್ವಾಗತಾರ್ಹ ಕ್ರಮವೆನ್ನಬಹುದಾಗಿದೆ. ಈ ಹೆಜ್ಜೆಗಳು ಕಾಲಾನುಕ್ರಮದಲ್ಲಿ ದೂರಗಾಮಿ ಬದಲಾವಣೆಗಳನ್ನು ಆರ್ಥಿಕ ವಲಯದ ಎಲ್ಲಾ ರಂಗಗಳಲ್ಲೂ ಸಹ ತಂದಿರುವುದಲ್ಲದೆ ವಿಶ್ವದ ನಕ್ಷೆಯಲ್ಲಿ ಭಾರತದಸ್ಥಾನವನ್ನು ವಿಶಿಷ್ಟಗೊಳಿಸಿದೆ. ಉದಾರೀಕರಣದ ನಂತರದ ಅವಧಿಯಲ್ಲಿ ಪರಿಚಯಿಸಲಾದ ಅನೇಕ ಕ್ರಮಗಳ ಪೈಕಿ ವಿಶೇಷ ಆರ್ಥಿಕ ವಲಯಗಳ ಕಾರ್ಯನೀತಿಯೂ ಸಹ ಒಂದಾಗಿದೆ.ಈ ಕಾರ್ಯನೀತಿಯನ್ನು ೧೯೯೭–೨೦೦೨ರ ಅವಧಿಯ ಆಮದು–ರಫ್ತು ಕಾರ್ಯನೀತಿ ವರದಿಯಲ್ಲಿ ಪ್ರಸ್ತಾವಿಸಲಾಗಿತ್ತು. ಇದರ ಉದ್ದೇಶವು ರಾಷ್ಟ್ರದಲ್ಲಿ ವ್ಯಾಪಾರ ವಹಿವಾಟಿನ ಒಳಹಂದರವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ವ್ಯಾಪಾರ ವಹಿವಾಟು ಕಾರ್ಯಕ್ಷಮತೆಯನ್ನು ವೇಗಗೊಳಿಸುವುದಾಗಿತ್ತು. ಇದರ ಒಂದು ಭಾಗವಾಗಿ ಸರ್ಕಾರವು ವ್ಯಾಪಾರ ವಹಿವಾಟುಗಳಲ್ಲಿನ ಬಹಳಷ್ಟು ಸಮಯವನ್ನು ಹಾಳುಮಾಡುವ ಪ್ರತಿಬಂಧಕಗಳನ್ನು ನಿವಾರಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಿತು. ಆ ಮೂಲಕ ವಿಶೇಷ ಆರ್ಥಿಕ ವಲಯಗಳನ್ನು (ಎಸ್‌ಇಜಡ್‌ಗಳು) ಸ್ಥಾಪಿಸಲು ಇದ್ದ ಅನೇಕ ಅಸಂಬದ್ಧ ಕಾರ್ಯವಿಧಾನಗಳನ್ನು ಸರಳೀಕೃತಗೊಳಿಸಿ ಏಕಗವಾಕ್ಷಿ ಕಾರ್ಯವಿಧಾನವನ್ನು ಪರಿಚಯಿಸಿತು. ಈಗಾಗಲೇ ಅನೇಕ ಸಂಶೋಧನಾ ಅಧ್ಯಯನಗಳು ಭಾರತದ ಎಸ್‌ಇಜಡ್ ಕಾರ್ಯ ನೀತಿಯನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸಲು ಪ್ರಯತ್ನಿಸಿವೆ. ಆದರೂ ಸಹ ಇನ್ನೂ ಕೆಲವು ಮುಖ್ಯ ಅಂಶಗಳನ್ನು ಈ ಅಧ್ಯಯನಗಳು ಬಿಟ್ಟಿವೆ. ಉದಾಹರಣೆಗೆ ಹೇಳುವುದಾದರೆ ಟಿಎಫ್[3] ಚೌಕಟ್ಟಿನಲ್ಲಿ ಈ ಏಕ ಗವಾಕ್ಷಿ ಕಾರ್ಯವಿಧಾನದ ಅನೇಕ ನಿರ್ದಿಷ್ಟ ಅಂಶಗಳ ಬಗ್ಗೆ ಅಧ್ಯಯನಗಳು ಆಗಿಲ್ಲ. ಇದೂ ಅಲ್ಲದೆ ವಾಸ್ತವ ವ್ಯಾಪಾರ ವಹಿವಾಟು ಕಾರ್ಯಗಳಲ್ಲಿ ಯಾವ ರೀತಿಯ ವ್ಯಾಪಾರಸ್ಥರು ಕಾರ್ಯ ನೀತಿಯಲ್ಲಿ ರೂಪಿಸಲಾಗಿರುವ ಭರವಸೆಗಳನ್ನು ಬಿಟ್ಟು ದೂರ ಸರಿಯುತ್ತಾರೆ ಎಂಬುದನ್ನೂ ಸಹ ಅಧ್ಯಯಿಸಲಾಗಿಲ್ಲ.

ಎಸ್‌ಇಜಡ್ ವಲಯಗಳಿಗೆ ಸಂಬಂಧಿಸಿದಂತೆ ಪ್ರಸ್ತಾವಿಸಲಾಗಿರುವ ಅಂಶಗಳು ನೇರವಾಗಿ ವಿವಿಧ ಮುಖಗಳ ಒಪ್ಪಂದಕ್ಕೆಆಸ್ಪದಕೊಡುವ ರೀತಿಯಲ್ಲಿ ಇಲ್ಲದಿದ್ದರೂ ಸಹ ವ್ಯಾಪಾರ–ವಹಿವಾಟಿಗೆ ಸಂಬಂಧಿಸಿದ ಪದ್ಧತಿಗಳು ಮತ್ತು ಆಚರಣೆಗಳ ನಡುವೆ ಸಾಮರಸ್ಯ ಉಂಟುಮಾಡಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಲು ಸಹಾಯಕಾರಿಯಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕಾರ್ಯನೀತಿ ಟಿಪ್ಪಣಿಯ ಉದ್ದೇಶವು ಭಾರತೀಯ ಎಸ್‌ಇಜಡ್‌ಗಳಿಗೆ ಸಂಬಂಧಿಸಿದಂತೆ ವ್ಯಾಪಾರ ಸರಳೀಕರಣಗಳನ್ನು ಮಾಡಲು ಇರುವ ಪ್ರತಿಬಂಧಕಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಹೊಂದುವುದಾಗಿದೆ. ಜೊತೆಗೆ ಎಸ್‌ಇಜಡ್‌ಗಳನ್ನು ಬೆಳವಣಿಗೆಯ ಚಾಲಕ ಶಕ್ತಿಯಾಗಿ ಹೊರಹೊಮ್ಮಿಸಲು ಸಹಾಯಕವಾಗಬಹುದಾದ ಕಾರ್ಯನಿರ್ವಾಹಕ ನೀತಿಗಳನ್ನು ರೂಪಿಸಲು ಸೂಕ್ತವಾದ ಸಲಹೆಗಳನ್ನು ಮಾಡುವುದೂ ಆಗಿದೆ (ಎಸ್‌ಇಜಡ್ ಮೂಲಕ ರಫ್ತು ಮಾಡಲು ಪ್ರತಿಬಂಧಕವಾಗಿರುವ ಕೆಲವು ನಿರ್ದಿಷ್ಟ ಪ್ರಮುಖ ಟಿಎಫ್ ಅಂಶಗಳನ್ನು ಒಳಗೊಂಡಂತೆ).

## ಪ್ರಮುಖ ಫಲಿತಾಂಶಗಳು

- ಎಸ್‌ಇಜಡ್ ಕಾರ್ಯನೀತಿಯು ಈಗಾಗಲೇ ವ್ಯಾಪಾರವಹಿವಾಟುಗಳನ್ನು ಮಾಡಲು ತೆಗೆದುಕೊಳ್ಳುವ ಸಮಯವನ್ನು ತಗ್ಗಿಸಲು ಹಾಗೂ ವಹಿವಾಟು ವೆಚ್ಚಗಳನ್ನು ಕಡಿತಗೊಳಿಸಲು ಯಾವ ರೀತಿಯ ಶಾಸನಬದ್ಧ ಅವಕಾಶಗಳನ್ನು ಉಪಯೋಗಿಸಬೇಕೆಂಬುದನ್ನು ಗುರುತಿಸಿಕೊಂಡಿದೆ ಮತ್ತು ಅನುಷ್ಠಾನಕ್ಕೆ ತರುತ್ತಿದೆ. ಇದನ್ನು ನಿರ್ದಿಷ್ಟವಾಗಿ ಕೆಳಕಂಡವುಗಳಲ್ಲಿ ಕಾಣಬಹುದಾಗಿದೆ: ಪರರಾಷ್ಟ್ರಗಳಲ್ಲಿ ಬ್ಯಾಂಕಿಂಗ್ ಘಟಕಗಳ ಸ್ಥಾಪನೆ (ಒಬಿಯು); ಎಸ್‌ಇಜಡ್‌ಆನ್‌ಲೈನ್; ಎಸ್‌ಇಜಡ್‌ಗಳಿಗೆ ಮತ್ತು ಇಒಯುಗಳಿಗೆ ರಫ್ತು ಉತ್ತೇಜನ ಪರಿಷತ್ತು (ಇಪಿಸಿ ಎಸ್‌ಇಜಡ್ – ಇಒಯು ಗಳು), ಆದ್ಯತೆಯ ಮೇರೆಗೆ ಸುಂಕದ ವಿಷಯಗಳನ್ನು ಪೂರ್ತಿಗೊಳಿಸುವುದು; ಮತ್ತು ಪದ್ಧತಿಯ ವಿಕೇಂದ್ರೀಕರಣ. ಇವುಗಳ ಹೊರತಾಗಿಯೂ ಸಹ ಎಸ್‌ಇಜಡ್‌ಗಳಲ್ಲಿನ ರಫ್ತುದಾರರು ದಾಖಲೀಕರಣ, ಕಾರ್ಯವಿಧಾನಗಳು ಮತ್ತು ಔಪಚಾರಿಕ ಕಾರ್ಯಾನುಸರಣೆ ಇತ್ಯಾದಿಗಳಲ್ಲಿನ ಅನೇಕ ಅಂಶಗಳಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದಾಗಿ ವ್ಯಾಪಾರ ವಹಿವಾಟು ಪೂರ್ಣಗೊಳಿಸಲು ಬೇಕಾಗುವ ಅವಧಿ ಹೆಚ್ಚಾಗುತ್ತದೆ ಅಥವಾ ಪರೋಕ್ಷ ಅಥವಾ ಅಪರೋಕ್ಷ ವಹಿವಾಟು ವೆಚ್ಚವು ಹೆಚ್ಚಾಗುತ್ತದೆ.

- ಕಾರ್ಯಕ್ಷಮತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಒಟ್ಟಾರೆಯಾಗಿ ಎಸ್‌ಇಜಡ್‌ಗಳ ಅಸ್ತಿತ್ವವು ಇಪಿಜಡ್‌ಗಳ ಬದಲಾಗಿಆಗಿದ್ದರಿಂದ ಭಾರತದರಫ್ತು ಕಾರ್ಯಕ್ಷಮತೆಯು ಸಕಾರಾತ್ಮಕ ಹಾಗೂ ಗಣನೀಯ ಪರಿಣಾಮವನ್ನು ಹೊಂದಿದೆ. ಪ್ರಸ್ತುತದಲ್ಲಿ ಭಾರತದಒಟ್ಟಾರೆರಫ್ತಿನ ಪೈಕಿ ಶೇ.೨೯ ರಷ್ಟು ಪ್ರಮಾಣವು ಎಸ್‌ಇಜಡ್‌ಗಳ ಮೂಲಕ ಆಗುತ್ತಿದೆ. ಈ ರೀತಿಯಾಗಿ ಸುಧಾರಿಸಲ್ಪಟ್ಟ ವ್ಯಾಪಾರ ವಹಿವಾಟುಗಳ ಕಾರ್ಯಕ್ಷಮತೆಯ ಮಟ್ಟವು ಮೇಲೆ ಹೇಳಿದಂತೆ ಶೇಕಡಾವಾರು ಪ್ರಮಾಣದ ಕೊಡುಗೆಯನ್ನಷ್ಟೇ ಅಲ್ಲದೆ ರಫ್ತು ಘಟಕಗಳ ಸಂಖ್ಯೆಯನ್ನೂ ಸಹ ಹೆಚ್ಚು ಮಾಡಿದೆ.

---


೧. ಈ ರೀತಿಯ ಪ್ರಜ್ಞಾಪೂರ್ವಕ ಕಾರ್ಯವಿಧಾನವು ಹೆಚ್ಚಿನ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕಾರ್ಯನೀತಿ ಆದ್ಯತೆಗಳು ಬದಲಾಗಿದ್ದರಿಂದಲೂ ಸಹ ಆಗಿರಬಹುದಾಗಿದೆ. ಅಂದರೆ ಕಾರ್ಯನೀತಿ ಆದ್ಯತೆಯು ಅಲ್ಪಾವಧಿಯ ಸಂಕಷ್ಟ ನಿರ್ವಹಣೆಯ ಬದಲಾಗಿ ದೀರ್ಘಾವಧಿಯ ವಿನ್ಯಾಸ ಹೊಂದಾಣಿಕೆ ಕಾರ್ಯಕ್ರಮಕ್ಕೆ (ಎಸ್‌ಎಪಿ) ಬದಲಾಗಿದೆ.

೨. ಉದಾಹರಣೆಗಾಗಿ ಇವುಗಳನ್ನು ನೋಡಿ: ಡೀ ಮತ್ತಿತರರು ೧೯೯೬; ಎಪಿಸೀ; ೧೯೯೭, ೧೯೯೯ ಮತ್ತು ೨೦೦೪; ಸ್ಟಾಪಲ್ಸ್ ೧೯೯೮; ಮಿಲ್ನರ್ ಮತ್ತಿತರರು ೨೦೦೦; ವಿಲ್ಸನ್‌ಮತ್ತಿತರರು ೨೦೦೩; ಪೋರ್ಚುಗಲ್ ಪೆರೇಸ್ ಮತ್ತು ವಿಲ್ಸನ್ ೨೦೧೦; ಮತ್ತಿತರರು.

೩. ಇದನ್ನು ನಿರ್ದಿಷ್ಟವಾಗಿಯೇ ಮಾಡಲಾಗಿದೆ. ಏಕೆಂದರೆ ಎಸ್‌ಇಜಡ್‌ಗಳು ರಫ್ತುದಾರರಿಗೆ ಉಳಿದ ಅರ್ಥವ್ಯವಸ್ಥೆಯನ್ನು ಕಾಡುವ ಬಾಧಕಗಳಿಂದ ರಕ್ಷಣೆಯನ್ನು ಒದಗಿಸುತ್ತವೆಂದು ಭಾವಿಸಲಾಗಿದೆ. ಅವೆಂದರೆ ಒಳ ಹಂದರ ಹಾಗೂ ಆಡಳಿತಾತ್ಮಕ ಅಂಶಗಳು ಮತ್ತು ಆ ಮೂಲಕ ವಿಶ್ವದ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಭಾರತದ ಸ್ಥಾನಮಾನ.

ಸಂಪಾದಕರು:
ಎಸ್. ಮಾನಸಿ


**ಚಿತ್ರ ೧: ರಾಷ್ಟ್ರದ ಒಟ್ಟಾರೆ ರಫ್ತಿನ ಪೈಕಿ ಎಸ್‌ಇಜಡ್‌ಗಳ ಪಾಲು**




ಆಧಾರ: ವಿವಿಧ ಮೂಲಗಳನ್ನು ಆಧರಿಸಿ ಲೇಖಕರು ಮಾಡಿರುವ ಲೆಕ್ಕಾಚಾರಗಳು


- ವಲಯವಾರು ಸಂರಚನೆಗೆ ಸಂಬಂಧಿಸಿದಂತೆ ಪ್ರಸ್ತುತ ಸಂದರ್ಭದಲ್ಲಿ ಎಸ್‌ಇಜಡ್ ಕಾರ್ಯನೀತಿಯು ರಫ್ತು ಉತ್ಪನ್ನಗಳ ವೈವಿಧ್ಯೀಕರಣವನ್ನು ಉಂಟು ಮಾಡುವುದರಲ್ಲಿ ಬಹಳ ಯಶಸ್ವಿಯಾಗೇನೂ ಇಲ್ಲ. ಇದನ್ನು ನಾವು ಔಪಚಾರಿಕವಾಗಿ ಅನುಮೋದಿಸಲ್ಪಟ್ಟಿರುವ ಎಸ್‌ಇಜಡ್‌ಗಳ ವಲಯವಾರು ಸಂರಚನೆಯಲ್ಲಿ (ಚಿತ್ರ ೨ ಮತ್ತು ೩) ಹಾಗೂ ರಫ್ತು ಉತ್ಪನ್ನಗಳ ವಲಯವಾರು ಸಂರಚನೆಯಲ್ಲಿ ಕಾಣಬಹುದಾಗಿದೆ. ಇದಕ್ಕೆ ಸರ್ಕಾರದ ಕೈಗಾರಿಕಾ ಮತ್ತು ವ್ಯಾಪಾರ ವಹಿವಾಟು ಕಾರ್ಯನೀತಿ ವಿಭಾಗಗಳ ಕಡಿಮೆ ಹೊಂದಾಣಿಕೆಯೂ ಸಹ ಒಂದು ಕಾರಣವಾಗಿರಬಹುದು.

**ಚಿತ್ರ ೨: ಔಪಚಾರಿಕ ಅನುಮೋದನೆಯನ್ನು ಪಡೆದಿರುವಎಸ್‌ಇಜಡ್‌ಗಳ ವಲಯವಾರು ಹಂಚಿಕೆ**




ಆಧಾರ: ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಜಡ್‌ಇಂಡಿಯಾ.ಎನ್‌ಐಸಿ.ಐಎನ್
(೨೦೧೬ ರ ನವೆಂಬರ್ ನಲ್ಲಿದ್ದಂತೆ)

**ಚಿತ್ರ ೩: ತಾಂತ್ರಿಕವಾಗಿ ಅನುಮೋದನೆ ನೀಡಿದ ಎಸ್‌ಇಜಡ್‌ಗಳ ವಲಯವಾರು ಹಂಚಿಕೆ**




ಆಧಾರ: ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಜಡ್‌ಇಂಡಿಯಾ.ಎನ್‌ಐಸಿ.ಐಎನ್
(೨೦೧೬ ರ ನವೆಂಬರ್ ನಲ್ಲಿದ್ದಂತೆ)

- ಆರಿಸಲ್ಪಟ್ಟ ಎಸ್‌ಇಜಡ್ ಗಳ ಪೈಕಿ ಅತಿ ಕಡಿಮೆ ವಹಿವಾಟು ವೆಚ್ಚ ಮಾಡಿದ ಹಾಗೂ ಅತಿ ಕಡಿಮೆ ಸಮಯವನ್ನು ವ್ಯಾಪಾರಕ್ಕಾಗಿ ತೆಗೆದುಕೊಂಡ ಎಸ್‌ಇಜಡ್‌ಗಳು ಸಾಂಪ್ರದಾಯಿಕ ಎಸ್‌ಇಜಡ್‌ಗಳಾಗಿದ್ದವು. ಈ ಎಸ್‌ಇಜಡ್‌ಗಳು ಹೊಸ ಪೀಳಿಗೆಯ ಎಸ್‌ಇಜಡ್‌ಗಳಿಗಿಂತ ಕೆಲವು ಹೆಚ್ಚಿನ ಸವಲತ್ತುಗಳನ್ನೂ ಹೊಂದಿದ್ದವು. ಅವೆಂದರೆ ವಿಮಾನ ನಿಲ್ದಾಣ, ಬಂದರುಗಳು ಇವುಗಳಿಗೆ ಹತ್ತಿರವಾಗಿರುವಿಕೆ ಹಾಗೂ ದಾಖಲೆಗಳ ಅನುಮೋದನೆಗಾಗಿ ಆಡಳಿತ ವ್ಯವಸ್ಥೆಯನ್ನೂ ಆ ಸ್ಥಳಗಳಲ್ಲಿ ಇಟ್ಟುಕೊಳ್ಳುವುದು ಇತ್ಯಾದಿ. ಈ ರೀತಿ ಮಾಡುವುದರಿಂದ ಸಾಂಪ್ರದಾಯಿಕ ಎಸ್‌ಇಜಡ್‌ಗಳ ಕೆಲಸ ಕಾರ್ಯಗಳು ತ್ವರಿತವಾಗಿ ನಡೆದವು. ಇದೇ ರೀತಿಯಲ್ಲಿಯೇ ಸಾಂಪ್ರದಾಯಿಕ ಎಸ್‌ಇಜಡ್‌ಗಳ ಒಳಗೆ ನಡೆದ ವ್ಯಾಪಾರ ವಹಿವಾಟುಗಳ ಪೈಕಿ ಸಾಂತಕ್ರೂಸ್‌ನಲ್ಲಿರುವ ಎಸ್‌ಇಜಡ್‌ನಲ್ಲಿನ ಮುತ್ತುಗಳು ಮತ್ತು ಆಭರಣಗಳ ವಲಯವು ಅತಿ ಕಡಿಮೆ ವಹಿವಾಟುಖರ್ಚನ್ನು ಮಾಡಿತು. ಇದಕ್ಕೆ ಕಾರಣವು ಬಹುಪಾಲು ಎಂಎಂಟಿಸಿಯನ್ನು ಎಸ್‌ಇಇಪಿಜಡ್ ಜಿ ಮತ್ತು ಜೆ ಗಳ ವಿಶೇಷ ಅಭಿರಕ್ಷಕನೆಂದು ನೇಮಕ ಮಾಡಿದುದು ಹಾಗೂ ವಿಮಾನದ ಮೂಲಕ ಸಾಗಿಸುವ ಸರಕುಗಳ ಮಧ್ಯವರ್ತಿಯಾಗಿ ನೇಮಿಸಿಕೊಂಡಿರುವುದಾಗಿದೆ. ಈ ಒಂದು ಉದಾಹರಣೆಯು ಎಸ್‌ಇಜಡ್‌ಗಳ ರಚನೆಯ ಒಳಗೆ ಲಭ್ಯವಾಗಬಹುದಾದ ಒಂದು ಅತ್ಯುತ್ತಮ ವ್ಯಾಪಾರ ವಹಿವಾಟು ಆಚರಣಾ ಪದ್ಧತಿಯಾಗಿದೆ.

**ಪಟ್ಟಿ ೧: ಇಡಿಐ ಮತ್ತುಎಸ್‌ಇಜಡ್ ಆನ್‌ಲೈನ್‌ಗಳ ನಡುವಿನ ಹೋಲಿಕೆ**

| ಕ್ರ. ಸಂ. | ಇಡಿಐ | ಎಸ್‌ಇಜಡ್‌ಆನ್‌ಲೈನ್ |
|---|---|---|
| ೧. | ಇದು ವ್ಯಾಪಾರವಹಿವಾಟುಗಳಲ್ಲಿ ತೊಡಗಿ–ಕೊಂಡಿರುವ ಎಲ್ಲಾ ಬಂದರುಗಳು, ವಿಮಾನ ನಿಲ್ದಾಣಗಳು, ಬ್ಯಾಂಕುಗಳು ಹಾಗೂ ವ್ಯಾಪಾರ ವಹಿವಾಟು ಮಧ್ಯವರ್ತಿಗಳನ್ನು ಸೇರಿಸುತ್ತದೆ | ಇದು ವ್ಯಾಪಾರ ವಹಿವಾಟು ನಡೆಸುವಯಾವುದೇ ವ್ಯಕ್ತಿ ಅಥವ ಸಂಸ್ಥೆಗಳನ್ನು ಒಟ್ಟುಗೂಡಿಸುವುದಿಲ್ಲ. ಹಾಗೆ ನೋಡಿದರೆ ಇದು ಎಸ್‌ಇಜಡ್ ಗೇಟ್‌ಗೆ ಸಹ ಸೇರಿಕೊಂಡಿಲ್ಲ |
| ೨. | ಇದು ಕೇವಲ ಎರಡು ಮುದ್ರಿತ ಪ್ರತಿಗಳನ್ನು ಮಾತ್ರ ಅಪೇಕ್ಷಿಸುತ್ತದೆ | ಇದು ನಾಲ್ಕು ಮುದ್ರಿತ ಪ್ರತಿಗಳನ್ನು ಅಪೇಕ್ಷಿಸುತ್ತದೆ |
| ೩. | ಎಲ್ಲಾ ಚಟುವಟಿಕೆಗಳನ್ನೂ ಸಹ ಆನ್‌ಲೈನ್ ಮೂಲಕ ಮಾಡಲಾಗುತ್ತದೆ | ಇದು ಒಂದೇ ಕೆಲಸವನ್ನು ಮತ್ತೆ ಮತ್ತೆ ಮಾಡುವಂತೆ ರಚಿಸಲ್ಪಟ್ಟಿದೆ. ಮೊದಲನೆಯದಾಗಿ ಸುಂಕದ ಅಧಿಕಾರಿಗಳು ಆನ್‌ಲೈನ್ ಮೂಲಕ ಒಪ್ಪಬೇಕಾಗಿರುತ್ತದೆ. ನಂತರ ಈ ಸರಕುಗಳನ್ನೂ ಮತ್ತೆ ದಾಖಲೆಗಳನ್ನೂ ಪ್ರತ್ಯೇಕವಾಗಿ ನೋಡಿ ಒಪ್ಪಬೇಕಾಗಿರುತ್ತದೆ. ಇವೂ ಅಲ್ಲದೆ ಎಸ್‌ಬಿ ಅಥವಾ ಬಿಒಇಗಳಲ್ಲಿನ ಯಾವುದೇ ರೀತಿಯ ತಪ್ಪುಗಳನ್ನೂ ಸರಿಪಡಿಸಲು ಆನ್‌ಲೈನ್ ಮೂಲಕ ನೇರವಾಗಿ ಬರುವ ಕೋರಿಕೆಗಳನ್ನು ಪುರಸ್ಕರಿಸುವದಿಲ್ಲ |
| ೪. | ವಹಿವಾಟು ಶುಲ್ಕವು ಅತಿಕಡಿಮೆ ಇರುತ್ತದೆ. ಒಂದು ವಹಿವಾಟಿಗೆ ೬೬ ರೂಪಾಯಿಗಳನ್ನು ವಿಧಿಸಲಾಗುತ್ತದೆ. ಇದರಲ್ಲಿ ಸುಂಕಕಟ್ಟಿದ ಚಲನ್‌ನ ಪ್ರತಿಯನ್ನೂ ಹಾಗೂ ಎಸ್‌ಬಿ ಮತ್ತು ಬಿಒಇಗಳ ಪ್ರತಿಗಳನ್ನೂ ಕೊಡುವುದು ಸೇರಿಕೊಂಡಿದೆ. ವಾರ್ಷಿಕ ನಿರ್ವಹಣಾ ವೆಚ್ಚವು (ಎಎಂಸಿ) ೧೬,೦೦೦ ರೂಗಳಾಗುತ್ತದೆ. | ಪ್ರತಿ ವಹಿವಾಟಿಗೆ ೨೦೦ ರೂಗಳನ್ನು ವಿಧಿಸಲಾಗುತ್ತದೆ. ಆದರೆ ಈ ಶುಲ್ಕದಲ್ಲಿ ಸಾಗಣೆ ಬಿಲ್ಲು ಅಥವಾ ಪ್ರವೇಶಾತಿ ಬಿಲ್ಲುಗಳ ಪ್ರತಿಗಳನ್ನು ತೆಗೆದುಕೊಡುವುದು ಒಳಗೊಂಡಿರುವುದಿಲ್ಲ. ವಾರ್ಷಿಕ ನಿರ್ವಹಣಾ ವೆಚ್ಚವು (ಎಎಂಸಿ) ೨೦,೦೦೦ ರೂಗಳಾಗುತ್ತದೆ. |
| ೫. | ಇದು ಸಿಎಚ್‌ಎ ಲಾಗಿನ್ ಐಡಿಯನ್ನು ಒಳಗೊಂಡಿದೆ | ಇದು ಸಿಎಚ್‌ಎ ಲಾಗಿನ್ ಐಡಿಯನ್ನು ಒಳಗೊಂಡಿರುವುದಿಲ್ಲ |

(ಆಧಾರ: ಲೇಖಕರು ಕ್ರೋಢೀಕರಿಸಿದ ವಿವರಗಳು)

- ಈ ರೀತಿಯಾಗಿ ಒಂದು ಉತ್ತಮ ಕಾರ್ಯಪದ್ಧತಿಯು ದೊರಕಿದ್ದರೂ ಸಹ ಎಸ್‌ಇಜಡ್‌ನಲ್ಲಿನ ರಫ್ತುದಾರರು ಅನೇಕ ಅಂಶಗಳನ್ನು ಕುರಿತಂತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವೆಂದರೆ: (೧) ದಾಖಲೀಕರಣ ಮತ್ತು ಕಾರ್ಯವಿಧಾನಗಳು, (೨) ತಾಂತ್ರಿಕ ನಿಬಂಧನೆಗಳು, (೩) ತೆರಿಗೆ ಅನುಕೂಲಗಳು/ಹಿಂಪಾವತಿ/ಜೊತೆಗೆ ಔಪಚಾರಿಕತೆ. ಇದರಿಂದಾಗಿ ವ್ಯಾಪಾರ ವಹಿವಾಟುಗಳನ್ನು ನಡೆಸಲು ಬೇಕಾದ ಅವಧಿಯು ಹೆಚ್ಚಾಗುತ್ತಿದೆ ಹಾಗೂ ವಹಿವಾಟು ವೆಚ್ಚಗಳೂ ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಹೆಚ್ಚಾಗುತ್ತಿವೆ. ಉದಾಹರಣೆಗೆ ಹೇಳುವುದಾದರೆ ಪ್ರಸ್ತುತದಲ್ಲಿ ಚಾಲ್ತಿಯಲ್ಲಿರುವ ಎಸ್‌ಇಜಡ್ ಆನ್‌ಲೈನ್ ಪದ್ಧತಿಯು ದಾಖಲೆಗಳಲ್ಲಿನ ಯಾವುದೇ ತಪ್ಪುಗಳನ್ನು ತಿದ್ದಲು

ಮಾಡಿದ ಮನವಿಗಳನ್ನೂ ಪ್ರೋತ್ಸಾಹಿಸುವುದಿಲ್ಲ (ಸಾಗಣೆ ಬಿಲ್ಲು ಅಥವಾ ಪ್ರವೇಶಾತಿ ಬಿಲ್ಲು ಅಥವಾ ಇತರೆ ಯಾವುದೇ ದಾಖಲೆಗಳು). ಜೊತೆಗೆ ಭಾರತದಲ್ಲಿ ಎಸ್‌ಇಜಡ್‌ನಲ್ಲಿಲ್ಲದ ರಫ್ತುದಾರರಿಗೆ ಇಡಿಐ ಪದ್ಧತಿಯಲ್ಲಿ ಲಭ್ಯವಾಗುವ ಅನುಕೂಲತೆಗಳಿಗೆ ಹೋಲಿಸಿದರೆ ಎಸ್‌ಇಜಡ್ ಆನ್‌ಲೈನ್‌ನನ್ನು ಬಳಸುವ ಬಳಕೆದಾರರಿಗೆ ವಹಿವಾಟು ವೆಚ್ಚ ಹೆಚ್ಚಾಗುತ್ತಿದೆ ಮತ್ತು ವಾರ್ಷಿಕ ನಿರ್ವಹಣಾ ಶುಲ್ಕವೂ ಸಹ ಬಹಳವಾಗುತ್ತಿದೆ.

- ಬಂಡವಾಳ ಹೂಡಿಕೆದಾರರ ನಂಬಿಕೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಇವೆರಡೂ ಸಹ ಅನೇಕ ತೆರಿಗೆ ಅನುಕೂಲತೆಗಳನ್ನೂ ಮತ್ತು ರಿಯಾಯಿತಿಗಳನ್ನೂ ಘೋಷಿಸಿವೆ. ಆದರೂ ಸಹ ಅಧ್ಯಯನಕಾರರು ರಫ್ತುದಾರರೊಡನೆ ನಡೆಸಿದ ಸಂವಾದದ ಮೂಲಕ ತಿಳಿದುಬಂದಿದ್ದೇನೆಂದರೆ ಈ ಅನುಕೂಲತೆಗಳನ್ನು ಮತ್ತು ರಿಯಾಯಿತಿಗಳನ್ನೂ ಪಡೆದುಕೊಳ್ಳಲು ವಿಪರೀತ ಕಷ್ಟವಾಗುತ್ತದೆ ಎಂಬುದು. ಏಕೆಂದರೆ ಇದಕ್ಕಾಗಿ ಅನೇಕ ತೊಡಕಾದ ಕಾರ್ಯವಿಧಾನಗಳಿರುವುದಲ್ಲದೆ ದಾಖಲೀಕರಣ ಶುಲ್ಕ ಇತ್ಯಾದಿಗಳೂ ಇವೆ. ಹಾಗೂ ಈ ಅನುಕೂಲತೆಗಳು ಮತ್ತು ರಿಯಾಯಿತಿಗಳು ಸತತವಾಗಿ ಬದಲಾವಣೆಗಳನ್ನು ಕಾಣುತ್ತಿರುತ್ತವೆ. ಇವೆಲ್ಲವುಗಳ ಜೊತೆಗೆ ತೆರಿಗೆ ಅನುಕೂಲತೆಗಳನ್ನು ಪಡೆದುಕೊಳ್ಳಲು ಇರುವ ಮತ್ತೊಂದು ಅನಾನುಕೂಲತೆಯೇನೆಂದರೆ ಇದರಲ್ಲಿನ ನಿಯಮಗಳು ಮತ್ತು ನಿಬಂಧನೆಗಳನ್ನು ವಿವಿಧ ಮಟ್ಟಗಳಲ್ಲಿ ಬೇರೆಬೇರೆ ರೀತಿಯಲ್ಲಿ ವಿಶ್ಲೇಷಿಸಲಾಗುತ್ತದೆ ಎಂಬುದು.
- ಇನ್ನೊಂದು ಎದ್ದುಕಾಣುವ ಅಂಶವೆಂದರೆ ಸಾಂಪ್ರದಾಯಿಕ ಎಸ್‌ಇಜಡ್‌ಗಳು ಮತ್ತು ಹೊಸ ಪೀಳಿಗೆಯ ಎಸ್‌ಇಜಡ್‌ಗಳ ನಡುವೆ ಇರುವ ಮೂಲಭೂತ ಸೌಕರ್ಯಗಳ ವ್ಯತ್ಯಾಸ (ಅವುಗಳ ಒಳಗೆ ಮತ್ತು ಸುತ್ತಮುತ್ತ). ಹೊಸ ಪೀಳಿಗೆಯ ಎಸ್‌ಇಜಡ್‌ಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಹೇಳುವುದಾದರೆ ಇವುಗಳು ಕಾರ್ಯಾಚರಣೆ ಪ್ರಾರಂಭಿಸಿ ಹಲವಾರು ವರ್ಷಗಳೇ ಕಳೆದಿದ್ದರೂ ಸಹ ಇವುಗಳನ್ನು ಅಭಿವೃದ್ಧಿ ಪಡಿಸಿದವರು ಮೂಲಭೂತ ಸೌಕರ್ಯಗಳ ಬಗ್ಗೆ ನೀಡಿದ ಭರವಸೆಯು ಇನ್ನೂ ಹುಸಿಯಾಗಿಯೇ ಇವೆ.

## ಕಾರ್ಯನೀತಿ ಶಿಫಾರಸುಗಳು

**ಹೊಸ ಪೀಳಿಗೆಯ ಎಸ್‌ಇಜಡ್‌ಗಳ ಕಾರ್ಯವ್ಯಾಪ್ತಿ ಮತ್ತು ಮೇಲುಸ್ತುವಾರಿ:** ಪ್ರಸ್ತುತ ಎಸ್‌ಇಜಡ್ ಕಾರ್ಯನೀತಿಯ ಪ್ರಕಾರ ಹೊಸ ಪೀಳಿಗೆಯ ಎಲ್ಲಾ ಎಸ್‌ಇಜಡ್ ಮೇಲುಸ್ತುವಾರಿಯು ಚಾಲ್ತಿಯಲ್ಲಿರುವ ೭ ಸಾಂಪ್ರದಾಯಿಕ ಎಸ್‌ಇಜಡ್‌ಗಳಲ್ಲಿನ ಅಭಿವೃದ್ಧಿ ಆಯುಕ್ತರ ಪೈಕಿ ಒಬ್ಬರಿಗೆ ವಹಿಸಲ್ಪಟ್ಟಿರುತ್ತದೆ (ಪಟ್ಟಿ ೧). ಇದರಿಂದಾಗಿ ಹೊಸ ಪೀಳಿಗೆಯ ಎಸ್‌ಇಜಡ್‌ಗಳ ಒಳಗೆ ವ್ಯಾಪಾರ ವಹಿವಾಟುಗಳನ್ನು ನಡೆಸಲು ಹೆಚ್ಚಿನ ವೇಳೆ ಹಿಡಿಯುತ್ತದೆ. ಆದ್ದರಿಂದ ಇದಕ್ಕೆ ಪರ್ಯಾಯವಾಗಿ ಈಗ ಚಾಲ್ತಿಯಲ್ಲಿರುವ ಎಸ್‌ಇಜಡ್ ಆನ್‌ಲೈನ್ ಪೋರ್ಟಲ್‌ನ್ನು ದೂರುಗಳನ್ನು ಸ್ವೀಕರಿಸುವುದಕ್ಕಾಗಿ ಉಪಯೋಗಿಸಬಹುದಾಗಿದೆ. ಹಾಗೂ ಆನ್‌ಲೈನ್ ಮುಖಾಂತರವೇ ದೂರುಗಳನ್ನು ಪರಿಹರಿಸಬಹುದಾಗಿದೆ.

**ಪಟ್ಟಿ ೧: ಚಾಲ್ತಿಯಲ್ಲಿರುವ ೭ ಸಾಂಪ್ರದಾಯಿಕ ಎಸ್‌ಇಜಡ್‌ಗಳ ವ್ಯಾಪ್ತಿ ಪ್ರದೇಶ**

| ಎಸ್‌ಇಜಡ್‌ಗಳು | ವ್ಯಾಪ್ತಿ ಪ್ರದೇಶ | ಔಪಚಾರಿಕ(%) | ತಾತ್ವಿಕ(%) | ಅಧಿಸೂಚಿತ (%) |
|---|---|---|---|---|
| ಕಾಂಡ್ಲಾ (ಕೆಎಸ್‌ಇಜಡ್) | ಗುಜರಾತ್ | ೭.೯೯ | ೧೪.೨೯ | ೮.೨೯ |
| ಸಾಂತಕ್ರೂಸ್ (ಎಸ್‌ಎಸ್‌ಇಜಡ್) | ಮಹಾರಾಷ್ಟ್ರ, ಗೋವಾ, ದಾದ್ರ ಮತ್ತು ನಗರ್ ಹವೇಲಿ, ಡಾಮನ್ ಮತ್ತು ಡಿಯು | ೧೯.೦೫ | ೩೨.೬೫ | ೧೭.೬೨ |
| ನೋಯ್ಡಾ (ಎನ್‌ಎಸ್‌ಇಜಡ್) | ಯುಪಿ, ರಾಜಸ್ಥಾನ, ಹರಿಯಾಣ, ಉತ್ತರಾಂಚಲ್, ಪಂಜಾಬ್, ದೆಹಲಿ, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಚಂಡೀಗಢ | ೧೭.೮೬ | ೧೦.೨ | ೧೮.೩೯ |
| ಫಾಲ್ಟ (ಎಫ್‌ಎಸ್‌ಇಜಡ್) | ಎಲ್ಲಾ ಪೂರ್ವದ ರಾಜ್ಯಗಳು ಮತ್ತು ಉತ್ತರ ಪೂರ್ವ ರಾಜ್ಯಗಳು | ೮೦.೧೮ | ೧೪.೨೯ | ೬.೪೮ |
| ಚೆನ್ನೈ (ಎಂಎಸ್‌ಇಜಡ್) | ತಮಿಳುನಾಡು ಮತ್ತು ಲಕ್ಷದ್ವೀಪ | ೧೧.೭೩ | ೧೨.೨೪ | ೧೩.೭೩ |
| ಕೊಚ್ಚಿನ್ (ಸಿಎಸ್‌ಇಜಡ್) | ಕೇರಳ, ಕರ್ನಾಟಕ ಮತ್ತು ಲಕ್ಷದ್ವೀಪ | ೧೫.೪೮ | ೨.೦೪ | ೧೫.೮೦ |
| ವಿಶಾಖಪಟ್ಟಣ (ವಿಎಸ್‌ಇಜಡ್) | ಆಂಧ್ರ ಪ್ರದೇಶ | ೧೮.೫೪ | ೧೨.೨೪ | ೧೯.೬೯ |

ಆಧಾರ: ೨೦೧೪ರ ಫೆಬ್ರವರಿ ತಿಂಗಳಿನಲ್ಲಿ ಇದ್ದಂತೆ ಸಂಗ್ರಹಿಸಲಾದದತ್ತಾಂಶ – ಎಸ್‌ಇಜಡ್ ಇಂಡಿಯಾ. ಎನ್‌ಐಸಿ.ಐಎನ್.

**ವಲಯ ಹಾಗೂ ಪ್ರಾದೇಶಿಕ ಸಮಸ್ಯೆಗಳಿಗೆ ಹೆಚ್ಚಿನಒತ್ತನ್ನು ನೀಡಬಹುದಾಗಿದೆ:** ಈ ರೀತಿಯಾಗಿ ವಲಯ ಹಾಗೂ ಪ್ರಾದೇಶಿಕ ಸಮಸ್ಯೆಗಳಿಗೆ ಒತ್ತನ್ನು ನೀಡುವುದರಿಂದ ವ್ಯಾಪಾರ ವಹಿವಾಟು ನಡೆಸಲು ಹೆಚ್ಚು ವಾಸ್ತವ ಮತ್ತು ಬಂಡವಾಳಸ್ನೇಹಿ ವಾತಾವರಣವನ್ನು ಉಂಟುಮಾಡಬಹುದಾಗಿದೆ. ಜೊತೆಗೆ ಹೊಸ ಪೀಳಿಗೆಯ ಎಸ್‌ಇಜಡ್‌ಗಳನ್ನು ಹತ್ತಿರದಿಂದ ಉಸ್ತುವಾರಿ ಮಾಡುವ ಅಗತ್ಯತೆಯೂ ಈಗ ಉಂಟಾಗಿದೆ. ಈ ರೀತಿಯ ಉಸ್ತುವಾರಿ ಯಾವುವೆಂದರೆ ರಫ್ತು ಘಟಕಗಳಿಗೆ ಮೂಲಭೂತ ಮತ್ತು ಬೆಂಬಲ ಸೌಕರ್ಯಗಳನ್ನು ಒದಗಿಸುವುದಾಗಿವೆ.

**ಎಸ್‌ಇಜಡ್‌ಆನ್‌ಲೈನನ್ನು ಮೇಲ್ದರ್ಜೆಗೇರಿಸುವ ಅಗತ್ಯತೆ:** ಎಸ್‌ಇಜಡ್ ಆನ್‌ಲೈನ್‌ನ ಮೂಲ ಉದ್ದೇಶವು ವ್ಯಾಪಾರವಹಿವಾಟುಗಳನ್ನು ಸ್ವಯಂಚಾಲಿತವನ್ನಾಗಿ ಮಾಡುವುದು; ಈ ವ್ಯಾಪಾರ ವಹಿವಾಟುಗಳಲ್ಲಿನ ಪುನರುಕ್ತಿಗಳನ್ನು ತಪ್ಪಿಸುವುದು ಹಾಗೂ ಅನಗತ್ಯವಾದ ದತ್ತಾಂಶಗಳನ್ನು ತೆಗೆದುಹಾಕುವುದಾಗಿದೆ. ಇದಕ್ಕಾಗಿ ಇ–ಪ್ರಯತ್ನದ ಮೂಲಕ ಅಭಿವೃದ್ಧಿ ಪಡಿಸಲಾಗಿರುವ ಎನ್‌ಡಿಎಂಎಲ್‌ಅನ್ನು ಆಚರಣೆಗೆ ತರಲು ಇನ್ನೂ ಸಾಧ್ಯವಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಎನ್‌ಡಿಎಂಎಲ್‌ನ್ನು ಒಂದು ಸಾಫ್ಟ್‌ವೇರ್‌ಅನ್ನಾಗಿ ನೋಡಲಾಗುತ್ತಿದೆ ಮತ್ತು ಅದನ್ನು ದತ್ತಾಂಶವನ್ನು ಕ್ರೋಢೀಕರಿಸಲು ಉಪಯೋಗಿಸಲಾಗುತ್ತಿದೆಯೇ ಹೊರತು ವ್ಯಾಪಾರ ವಹಿವಾಟುಗಳನ್ನು ಸರಳೀಕರಿಸಿಕೊಳ್ಳಲು ಉಪಯೋಗಿಸುತ್ತಿಲ್ಲ. ಜೊತೆಗೆ ಇಡಿಐ ನಂತಲ್ಲದೇ ಇದನ್ನು ಯಾವುದೇ ವ್ಯಾಪಾರ ವಹಿವಾಟು ಮಾಡುವ ಸಂಸ್ಥೆಗಳೊಂದಿಗೆ ಸಂಪರ್ಕಿಸಿಲ್ಲ. ಇದೂ ಅಲ್ಲದೆ ಎಸ್‌ಇಜಡ್ ಆನ್‌ಲೈನ್ ವಹಿವಾಟು ಶುಲ್ಕ ಹಾಗೂ ಎಎಂಸಿ ದರಗಳು ಇಡಿಐ ಶುಲ್ಕಕ್ಕಿಂತ ಹೋಲಿಕೆಯಲ್ಲಿ ಹೆಚ್ಚು ಎನಿಸುತ್ತಿದೆ. ಇದರ ಪರಿಣಾಮವಾಗಿ ವಹಿವಾಟು ಕಾರ್ಯದ ಬಹಳಷ್ಟು ಪುನರುಕ್ತಿ ನಡೆಯುತ್ತಿದೆಯಲ್ಲದೆ ಸಾಕಷ್ಟು ಸಮಯವೂ ಸಹ ನಷ್ಟವಾಗುತ್ತಿದೆ. ಆದ್ದರಿಂದ ಇದನ್ನು ಪುನರ್‌ವಿನ್ಯಾಸಗೊಳಿಸಬೇಕಾಗಿದೆ. ಹಾಗೂ ಎಸ್‌ಇಜಡ್‌ನಲ್ಲಿನ ರಫ್ತುದಾರರ ವ್ಯಾಪಾರವಹಿವಾಟುಗಳನ್ನು (ಉದಾಹರಣೆಗೆ ಸುಂಕದಕಟ್ಟೆ, ಬ್ಯಾಂಕುಗಳು, ವಿಮಾನದಲ್ಲಿ ಸಾಗಿಸುವ ಸರಕುಗಳು, ಉಗ್ರಾಣಗಳು, ಸಿಹೆಚ್‌ಎ) ಮಾಡಲು ವಿವಿಧ ಮಧ್ಯವರ್ತಿಗಳೊಡನೆ ಸಂಪರ್ಕಿಸಬೇಕಾಗುತ್ತದೆ. ಇವೆಲ್ಲವುಗಳ ಜೊತೆಗೆ ಎಸ್‌ಇಜಡ್ ಆನ್‌ಲೈನ್ ಮೂಲಕ ಆಗುವ ವಹಿವಾಟುಗಳ ಶುಲ್ಕವನ್ನು ಪುನರ್ ಪರಿಷ್ಕರಿಸಬೇಕಾಗುತ್ತದೆ.

**ಹಿಂಪಾವತಿ ಮತ್ತು ತುಂಬಿಕೊಡುವಿಕೆಗೆ ಸಂಬಂಧಿಸಿದಂತಹ ಪದ್ಧತಿಗಳು:** ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರ ಎಸ್‌ಇಜಡ್‌ಗಳನ್ನು ಬೆಳವಣಿಗೆಯ ಚಾಲಕ ಶಕ್ತಿಗಳನ್ನಾಗಿ ಮಾಡಲು ಅನೇಕ ತೆರಿಗೆ ಅನುಕೂಲಗಳನ್ನೂ ಮತ್ತು ರಿಯಾಯತಿಗಳನ್ನೂ ಕೊಡುತ್ತಿವೆ. ಆದರೂ ಸಹ, ಈ ರೀತಿಯ ಅನುಕೂಲತೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಂಯೋಜನೆಯ ಕೊರತೆ ಎದ್ದು ಕಾಣುತ್ತಿದೆ. ಪ್ರಸ್ತುತ ಅಧ್ಯಯನದಲ್ಲಿ ಸಮೀಕ್ಷಿಸಿದ ಪ್ರಕಾರ ರಫ್ತುದಾರರು ಈ ಅನುಕೂಲತೆಗಳನ್ನು ಮತ್ತು ರಿಯಾಯಿತಿಗಳನ್ನೂ ಪಡೆಯಲು ಬಹಳ ಕಷ್ಟಪಡಬೇಕಾಗಿದೆ ಮತ್ತು ಮಾಡಿದ ಖರ್ಚನ್ನು ಸರ್ಕಾರದಿಂದ ತುಂಬಿಸಿಕೊಳ್ಳಲು ಸಹ ಶ್ರಮ ಪಡಬೇಕಾಗಿದೆ. ಆದ್ದರಿಂದ ಸರ್ಕಾರದ ಈ ಅನುಕೂಲತೆಗಳನ್ನು ಸರಳೀಕೃತಗೊಳಿಸಬೇಕಾಗಿದೆಯಲ್ಲದೆ, ಬಂಡವಾಳಗಾರರ ಸ್ನೇಹಿಯನ್ನಾಗಿಯೂ ಸಹ ಮಾಡಬೇಕಾಗಿದೆ.

**ಅರ್ಜಿಗಳನ್ನು ಕಾಲಕ್ಕೆ ಸರಿಯಾಗಿ ವಿಲೇವಾರಿ ಮಾಡುವಿಕೆ:** ಸದರಿ ವಿಷಯಗಳಿಗೆ ಸಂಬಂಧಿಸಿದಂತಹ ಅರ್ಜಿಗಳನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಬೇಕಾಗಿರುತ್ತದೆ.ಈ ಉದ್ದೇಶಕ್ಕಾಗಿ ಸರ್ಕಾರವು ಪ್ರತಿಯೊಂದು ವಿಷಯದ ಅರ್ಜಿಗಳ ವಿಲೇವಾರಿಗೂ ಸಹ ಪ್ರತ್ಯೇಕ ಸಮಯದ ಮಿತಿಯನ್ನು ನಿಗದಿ ಪಡಿಸಬೇಕಾಗುತ್ತದೆ. ಜೊತೆಗೆ ರಫ್ತುದಾರರಿಗೆ ದೊರೆಯುವ ಸೌಲಭ್ಯಗಳನ್ನು ಸರ್ಕಾರಿ ವ್ಯವಸ್ಥೆಯು ಸೂಕ್ತ ಸಮಯದಲ್ಲಿ ಕೊಡಲು ವಿಫಲವಾದ ಪಕ್ಷದಲ್ಲಿ, ಮೇಲ್ಮನವಿಗಳನ್ನು ತೀರ್ಮಾನಿಸಲು ವಿಚಾರಣಾ ಪ್ರಾಧಿಕಾರವನ್ನು ಸಹ ನೇಮಿಸಬೇಕಾಗಿರುತ್ತದೆ.

**ರಫ್ತುದಾರರು ಮತ್ತು ನಿರ್ಮಾಣಗಾರರಿಗೆ ಏಕ ಗವಾಕ್ಷಿ ಸೌಲಭ್ಯ ನೀಡುವಿಕೆ:** ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದಂತಹ ಅಂಶಗಳ ವಹಿವಾಟು ವೆಚ್ಚಗಳನ್ನು ತಗ್ಗಿಸುವಿಕೆ ಹಾಗೂ ಸಮಯವನ್ನು ಉಳಿಸುವುದಕ್ಕಾಗಿ ಸರ್ಕಾರವು ಪ್ರಾರಂಭಿಸಿರುವ ಈ ಏಕಗವಾಕ್ಷಿ ಸೇವೆಯು ಎಸ್‌ಇಜಡ್ ನೀತಿಯ ಅನುಷ್ಠಾನದಲ್ಲಿನ ಒಂದು ಪ್ರಮುಖ ಹೆಜ್ಜೆಯಾಗಿದೆ. ಆದರೂ ಸಹ ಈ ಕಾರ್ಯ ನೀತಿಯನ್ನು ಸಶಕ್ತಗೊಳಿಸಲು ಇದೇ ರೀತಿಯ ಇನ್ನೂ ಹಲವಾರು ಹೆಜ್ಜೆಗಳನ್ನು ಇಡಬೇಕಾಗಿದೆ. ಆ ಮೂಲಕ ವಹಿವಾಟು ಕಾರ್ಯದ ಮತ್ತು ದಾಖಲೀಕರಣ ಕಾರ್ಯದ ಪುನರುಕ್ತಿಯನ್ನು ತಡೆಯಬಹುದಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಹಿಡಿಯಲಾಗಿದೆ. ಸರ್ಕಾರವು ಇದನ್ನರಿತು ರಫ್ತುದಾರರಿಗೆ ಮತ್ತು ನಿರ್ಮಾಣಗಾರರಿಗಾಗಿ ಒಂದೇ ಕಡೆ ಎಲ್ಲಾ ಸೇವೆಗಳು ಲಭ್ಯವಾಗುವಂತಹ ಸಮಗ್ರ ಏಕಗವಾಕ್ಷಿ ಸೇವೆಯನ್ನು ಪ್ರಾರಂಭಿಸಬೇಕಾಗಿದೆ.

**ಎಸ್‌ಇಜಡ್‌ಗಳ ಬಗೆಗಿನ ದತ್ತಾಂಶ:** ರಾಷ್ಟ್ರದಲ್ಲಿನ ಎಸ್‌ಇಜಡ್‌ಗಳ ವಿವಿಧ ಅಂಶಗಳ ಬಗೆಗಿನ ಕಾರ್ಯಕ್ಷಮತೆಯನ್ನು ವಸ್ತುನಿಷ್ಠ ರೀತಿಯಲ್ಲಿ ಮೌಲ್ಯಮಾಪನ ಮಾಡಲು ನಂಬಿಕೆಗೆ ಅರ್ಹವಾದ ದತ್ತಾಂಶವು ಅಗತ್ಯವಾಗಿರುತ್ತದೆ. ಆದರೆ, ದುರದೃಷ್ಟವಶಾತ್

ಸರ್ಕಾರದ ಮಟ್ಟದಲ್ಲಾಗಲೀ ಅಥವಾ ಪ್ರಾದೇಶಿಕ ಮಟ್ಟದಲ್ಲಾಗಲೀ ಈ ರೀತಿಯ ವ್ಯವಸ್ಥಿತ ದತ್ತಾಂಶವನ್ನು ಇಟ್ಟುಕೊಂಡಿಲ್ಲದಿರುವುದರಿಂದ ಸಂಶೋಧನೆಯನ್ನು ನಡೆಸಲು ಕಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನಕಾರರು ಬಲವಾಗಿ ಪ್ರತಿಪಾದಿಸುವುದೇನೆಂದರೆ ವ್ಯವಸ್ಥಿತವಾದ ದತ್ತಾಂಶ ಸಂಗ್ರಹಣೆಯನ್ನು ಸರ್ಕಾರವು ಮಾಡಿಸಬೇಕು ಮತ್ತು ಎಸ್‌ಇಜಡ್ ಕಾರ್ಯಕ್ಷಮತೆಗೆ ಸಂಬಂಧಿಸಿದ ವಿವಿಧ ಆಯಾಮಗಳ ಬಗೆಗಿನ ದತ್ತಾಂಶ ಆಧಾರಗಳನ್ನೂ ಸಂಗ್ರಹಿಸಬೇಕು ಎಂಬುದಾಗಿದೆ.

ಈ ಬಗೆಗಿನ ಪೂರ್ಣವರದಿಯನ್ನು ಅಧ್ಯಯಿಸಲು ಮುಂದೆ ಸೂಚಿಸಲಾಗಿರುವ ಆಧಾರ ಲೇಖನವನ್ನು ಪರಿಶೀಲಿಸ ಬಹುದಾಗಿದೆ: ತಂತ್ರಿ ಮಾಲಿನಿ ಎಲ್., ೨೦೧೪. ವ್ಯಾಪಾರ ವಹಿವಾಟು ನಡೆಸುವಿಕೆ ಮತ್ತು ವ್ಯಾಪಾರ ವಹಿವಾಟಿನ ಕಾರ್ಯಕ್ಷಮತೆ: ಆಯ್ದ ಎಸ್‌ಇಜಡ್‌ಗಳ ಒಂದು ಮೌಲ್ಯಮಾಪನ, ಸಿಇಎಸ್‌ಪಿ, ಬೆಂಗಳೂರು. ಜೊತೆಗೆ ಇದನ್ನೂ ನೋಡಿ: ತಂತ್ರಿ, ಮಾಲಿನಿ ಎಲ್ (೨೦೧೬) ವ್ಯಾಪಾರ ವಹಿವಾಟಿನ ಕಾರ್ಯಕ್ಷಮತೆಯ ಮೇಲೆ ವ್ಯಾಪಾರ ಸರಳೀಕರಣದ ಅನಿವಾರ್ಯತೆಗಳು: ಭಾರತದ ಆಯ್ದ ಎಸ್‌ಇಜಡ್‌ಗಳಿಗೆ ಸಂಬಂಧಿಸಿದಂತಹ ಒಂದು ಮೌಲ್ಯಮಾಪನ, ಐಸೆಕ್ ನೀಳ ಲೇಖನ ಸರಣಿ, ಐಸೆಕ್, ಬೆಂಗಳೂರು.

## ಆಧಾರ ಲೇಖನಗಳು/ಗ್ರಂಥಗಳು


೧. ಎಪಿಇಸಿ (೧೯೯೭), "ಎಪಿಇಸಿಯಲ್ಲಿ ವ್ಯಾಪಾರ ವಹಿವಾಟಿನ ಉದಾರೀಕರಣದಿಂದ ಆಗಿರುವ ಪರಿಣಾಮ", ೯೭ – ಸಿಟಿ – ೦೧.೨, ಎಪಿಇಸಿ.

೨. ಎಪಿಇಸಿ (೧೯೯೯), "ಎಪಿಇಸಿಯಲ್ಲಿನ ವ್ಯಾಪಾರ ಉದಾರೀಕರಣ ಮತ್ತು ಸುಲಭಗೊಳಿಸುವಿಕೆಯನ್ನು ಅಂದಾಜೀಕರಿಸುವಿಕೆ: ೧೯೯೯ರ ಮಾಹಿತಿ", ಆರ್ಥಿಕ ಸಮಿತಿ, ಸೆಪ್ಟೆಂಬರ್ ೧೯೯೯, ಎಪಿಇಸಿ: ಸಿಂಗಪೂರ್.

೩. ಎಪಿಇಸಿ (೨೦೦೪), "ವ್ಯಾಪಾರ ವಹಿವಾಟು ಸುಲಭಗೊಳಿಸುವಿಕೆ ಮತ್ತು ಉದಾರೀಕರಿಸುವಿಕೆ: ಶಾಂಘೈನಿಂದ ಬೊಗೋರ್‌ವರೆಗೆ", ಎಪಿಇಸಿ ಆರ್ಥಿಕ ಸಮಿತಿ, ಎಪಿಇಸಿ: ಸಿಂಗಪೂರ್.

೪. ಡೀ, ಫಿಲಿಪ್ಪ; ಗೀಸ್ಲರ್, ಕ್ರಿಸ್ ಮತ್ತು ವಾಟ್ಸ್, ಗ್ರೇಗ್ (೧೯೯೬), "ಎಪಿಎಸಿಗಳು ಮುಕ್ತವ್ಯಾಪಾರ ವಹಿವಾಟುಗಳಿಗೆ ಬದ್ಧವಾಗಿರುವುದರ ಪರಿಣಾಮ", ಸಿಬ್ಬಂದಿಗೆ ಮಾಹಿತಿನೀಡುವ ಲೇಖನ, ಆಸ್ಟ್ರೇಲಿಯಾದ ಕೈಗಾರಿಕಾ ಆಯೋಗ.

೫. ಸ್ಟಾಪಲ್ಸ್, ಬ್ರಿಯಾನ್‌ಆರ್ (೧೯೯೮), ವ್ಯಾಪಾರ ವಹಿವಾಟು ಸುಲಭಗೊಳಿಸುವಿಕೆ (ಕರಡು), "ವಿಶ್ವದ ಒಟ್ಟಾರೆ ವ್ಯಾಪಾರ ವಹಿವಾಟು ಸಂಧಾನಗಳ ಮೂಲ ಪುಟ – ವ್ಯಾಪಾರ ವಹಿವಾಟು ಸುಲಭಗೊಳಿಸುವಿಕೆ". (ಹೆಚ್‌ಟಿಟಿಪಿ/ ಡಬ್ಲ್ಯೂಡಬ್ಲ್ಯೂಡಬ್ಲ್ಯೂ ಸಿಐಡಿ.ಹಾರ್ವರ್ಡ್.ಎಜು/ ಸಿಡ್‌ಟ್ರೇಡ್/ಇಷ್ಯೂಸ್/ ಟ್ರೇಡ್ ಪ್ಯಾಕ್.ಹೆಚ್.ಟಿಎಂಎಲ್)

೬. ಮಿಲ್ನರ್, ಸಿ; ಮೋರಿಸ್ಸಿ ಒ ಮತ್ತುಎನ್‌ರುಡಹೆರನ್ವ (೨೦೦೦), "ವ್ಯಾಪಾರ ವಹಿವಾಟುಗಳಿಗೆ ಕಾರ್ಯನೀತಿಗಳ ಮತ್ತು ಕಾರ್ಯನೀತಿಯೇತರ ಪ್ರತಿಬಂಧಕಗಳು ಹಾಗೂ ಉಗಾಂಡದಲ್ಲಿ ರಫ್ತಿನ ಮೇಲೆ ಸ್ಪಷ್ಟ ತೆರಿಗೆಗಳು", ಅಭಿವೃದ್ಧಿ ಅಧ್ಯಯನಗಳ ನಿಯತಕಾಲಿಕೆ, ಸಂಪುಟ ೩೭ (೨), ಪುಟಗಳು ೬೭ ರಿಂದ ೯೦.

೭. ಪೋರ್ಚುಗಲ್ ಪೆರೇಜ್, ಎ ಮತ್ತು ವಿಲ್ಸನ್ ಜೆ ಎಸ್ (೨೦೧೨), "ರಫ್ತು ಕಾರ್ಯಕ್ಷಮತೆ ಮತ್ತುವ್ಯಾಪಾರ ವಹಿವಾಟಿನ ಸರಳೀಕರಣಕ್ಕಾಗಿ ಸುಧಾರಣೆಗಳು; ಒಳಹಂದರಗಳು – ಹಾರ್ಡ್ ಮತ್ತು ಸಾಫ್ಟ್‌ವೇರ್‌ಗಳ ವಿಶ್ವಅಭಿವೃದ್ಧಿ ನಿಯತಕಾಲಿಕೆ, ೪೦(೭), ೧೨೯೫–೧೩೦೭; ಇದನ್ನು ಬೀಜಿಂಗ್‌ನಲ್ಲಿ ನಡೆದ ಆರ್ಟ್‌ನೆಟ್ ವಿಚಾರ ಸಂಕಿರಣದಲ್ಲಿ ಮಂಡಿಸಲಾಯಿತು. ವಿಷಯ: "ವ್ಯಾಪಾರ ವಹಿವಾಟನ್ನು ಸುಲಭಗೊಳಿಸುವಿಕೆಗಾಗಿ ಮುಂದೆ ಮಾಡಬೇಕಾದ ಸಂಶೋಧನೆಗಳ ವಿಷಯಗಳು".

೮. ವಿಲ್ಸನ್, ಜೆ.ಎಸ್., ಮನ್ನ್, ಸಿ ಎಲ್ ಮತ್ತು ಓಟ್ಸುಕಿ, ಟಿ (೨೦೦೩), "ವ್ಯಾಪಾರ ವಹಿವಾಟು ಸುಲಭಗೊಳಿಸುವಿಕೆ ಮತ್ತು ಆರ್ಥಿಕ ಅಭಿವೃದ್ಧಿ: ಪರಿಣಾಮವನ್ನು ಅಳೆಯಲು ಒಂದು ಹೊಸ ಕಾರ್ಯವಿಧಾನ". ವಿಶ್ವ ಬ್ಯಾಂಕ್ ಆರ್ಥಿಕ ಪರಿಶೀಲನೆ ನಿಯತಕಾಲಿಕೆ, ಸಂಪುಟ ೧೭, ಸಂಚಿಕೆ ೩, ಪುಟಗಳು ೩೫೭ ರಿಂದ ೩೮೯ ರವರೆಗೆ.





**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ,**
ಡಾ.ವಿಕೆಆರ್‌ವಿ ರಾವ್ ರಸ್ತೆ, ನಾಗರಬಾವಿ ಪೋಸ್ಟ್, ಬೆಂಗಳೂರು ೫೬೦ ೦೭೨.
ದೂರವಾಣಿ: ೨೩೨೧೫೪೬೮, ೨೩೨೧೫೫೧೯, ಫ್ಯಾಕ್ಸ್: +೯೧–೮೦–೨೩೨೧೭೦೦೮; ವೆಬ್: ಹೆಚ್‌ಟಿಟಿಪಿ:// ಡಬ್ಲ್ಯೂಡಬ್ಲ್ಯೂಡಬ್ಲ್ಯೂ.ಐಸೆಕ್.ಎಸ್.ಐಎನ್.